ರಾಜ್ಯದಲ್ಲಿ ಹೊಸ ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆ

1526 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಹೊಸದಾಗಿ ಎಷ್ಟು ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ. ಆ ಕಾಲೇಜುಗಳು ಯಾವುವು?*

ಆ) *ಹೊಸದಾಗಿ ಪ್ರಾರಂಭಿಸಲು ಅನುಮತಿ ಕೋರಿ ಎಷ್ಟು ಶಿಕ್ಷಣ ಸಂಸ್ಥೆಗಳು ಅರ್ಜಿ ಸಲ್ಲಿಸಿದ್ದವು? ಅವುಗಳು ಯಾವುವು ಪೂರ್ಣ ವಿವರ ನೀಡುವುದು?*

ಇ) *ಯಾವ ಆಧಾರದ ಮೇಲೆ ಹೊಸ ಕಾಲೇಜುಗಳ ಸ್ಥಾಪನೆಗೆ ಅನುಮತಿ ನೀಡಲಾಗಿದೆ?*

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) 15. ಈ ಕೆಳಕಂಡ ಕಾಲೇಜುಗಳಿಗೆ ಅನುಮೋದನೆ ನೀಡುವಂತೆ ಎಐಸಿಟಿಇ ಗೆ ಶಿಫಾರಸ್ಸು ಮಾಡಲಾಗಿದೆ.

(1) ಬಾಹುಬಲಿ ಇಂಜೀನಿಯರಿಂಗ್ ಕಾಲೇಜು, ಶ್ರವಣಬೆಳಗೊಳ.

(2) ಜೆ.ಎಸ್.ಎಸ್. ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಷನ್ ಬೆಂಗಳೂರು.

(3) ವೀರಶೈವ ವಿದ್ಯಾವರ್ಧಕ ಸಂಘದ ಇಂಜೀನಿಯರಿಂಗ್ ಕಾಲೇಜು, ಹೊಸಪೇಟೆ.

(4) ವಿದ್ಯಾವರ್ಧಕ ಸಂಘದ ಇಂಜೀನಿಯರಿಂಗ್ ಕಾಲೇಜು, ಮೈಸೂರು.

(5) ಎ.ಪಿ.ಎಸ್. ರೂರಲ್ ಇಂಜೀನಿಯರಿಂಗ್ ಕಾಲೇಜು, ಸೋಮನಹಳ್ಳಿ, ಬೆಂಗಳೂರು.

(6) ಬೆಂಗಳೂರು ಕಾಲೇಜ್ ಆಫ್ ಇಂಜೀನಿಯರಿಂಗ್, ಮಾಲೂರು.

(7) ಬೇಲಿಮಠ ಮಹಾಸಂಸ್ಥಾನದ ಇಂಜೀನಿಯರಿಂಗ್ ಕಾಲೇಜು, ನೆಲಮಂಗಲ.

(8) ಮರಾಠ ಮಂಡಲ ಇಂಜೀನಿಯರಿಂಗ್ ಕಾಲೇಜು, ಬೆಳಗಾಂ.

(9) ರೇವಣ ಸಿದ್ದೇಶ್ವರ ಇನ್ಸಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಚೊಕ್ಕೇನಹಳ್ಳಿ ದೇವನಹಳ್ಳಿ, ತಾಲ್ಲೂಕು.

(10) ತೋಟದ ಸಿದ್ದಲಿಂಗೇಶ್ವರ ಕಲ್ಯಾಣ ಕೇಂದ್ರದ ಇಂಜೀನಿಯರಿಂಗ್ ಕಾಲೇಜು ಗದಗ- ಬೆಟಗೇರಿ.

(11) ಎಸ್.ಜಿ.ಇ.ಇ.ಎಸ್, ಇಂಜಿನಿಯರಿಂಗ್ ಕಾಲೇಜು, ತರಿಹಾಳ್, ಹುಬ್ಬಳ್ಳಿ.

(12) ಹೆಚ್.ಎಂ.ಎಸ್.ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು.

(13) ಬಳ್ಳಾರಿ ರೂರಲ್ ಇಂಜೀನಿಯರಿಂಗ್ ಕಾಲೇಜು, ಬಳ್ಳಾರಿ.

(14) ಕೆ.ಎಸ್.ಎಂ.ಎಫ್. ಇಂಜೀನಿಯರಿಂಗ್ ಕಾಲೇಜು, ಬೆಂಗಳೂರು.

(15) ಜಿ.ಟಿ.ಎಲ್. ಇನ್ಸ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ್, ಆನೇಕಲ್.

ಆ) ನೂತನ ಇಂಜೀನಿಯರಿಂಗ್ ಕಾಲೇಜುಗಳ ಸ್ಥಾಪನೆಗೆ ಸ್ವೀಕೃತವಾಗಿದ್ದ ಅರ್ಜಿಗಳ ವಿವರ ಈ ಕೆಳಕಂಡಂತಿದೆ.

(1) ಎನ್.ಆರ್.ಐ. ಚಿಲ್ಡ್ರನ್ಸ್ ಎಜುಕೇಷನ್ ಟ್ರಸ್ಟ್, ಬೆಂಗಳೂರು.

(2) ಕಾವೇರಿ ಎಜುಕೇಷನಲ್ ಟ್ರಸ್ಟ್ ಚಂದಾಪುರ, ಆನೇಕಲ್ ತಾಲ್ಲೂಕು.

(3) ಮೂಗಾಂಭಿಕಾ ಎಜುಕೇಷನಲ್ ಅಂಡ್ ಚಾರಿಟೇಬಲ್ ಟ್ರಸ್ಟ್, ಕೆಂಗೇರಿ.

(4) ರಾಜೇಂದ್ರ ಎಜುಕೇಷನಲ್ ಸೊಸೈಟಿ ಬೆಂಗಳೂರು.

(5) ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ತು, ವಡ್ರಹಳ್ಳಿ, ಮಾಗಡಿ.

(6) ಕರ್ನಾಟಕ ಎಜುಕೇಷನ್ ಫೌಂಡೇಷನ್, ದೊಡ್ಡಬಳ್ಳಾಪುರ.

(7) ಸೇಂಟ್ ಮೇರಿಸ್ ಕಾಲೇಜ್ ಆಫ್ ಇಂಜೀನಿಯರಿಂಗ್, ಎಕರಾಜಪುರ, ಹೊಸಕೋಟೆ.

(8) ಎನ್.ಎಸ್.ವಿ.ಕೆ. ಟ್ರಸ್ಟ್ ಬೆಂಗಳೂರು.

(9) ತುಂಗಭದ್ರಾ ಶಿಕ್ಷಣ ಆರೋಗ್ಯ ಮತ್ತು ಗ್ರಾಮೀಣಾಭಿವೃದ್ಧಿ ಟ್ರಸ್ಟ್, ಬಳ್ಳಾರಿ.

(10) ಶರಣಬಸವೇಶ್ವರ ವಿದ್ಯಾಪೀಠ, ಬಳ್ಳಾರಿ.

(11) ಇಸ್ಲಾಮಿಯಾ ಶಿಕ್ಷಣ ಟ್ರಸ್ಟ್, ಗುಲ್ಬರ್ಗಾ.

(12) ಕರ್ನಾಟಕ ಇನ್ಸ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬಾಚಿ, ಬೆಳಗಾಂ.

(13) ಮದಕರಿನಾಯಕ ಶಿಕ್ಷಣ ಸಂಸ್ಥೆ, ಐಮಂಗಳ, ಹಿರಿಯೂರು.

(14) ಸಾಗರಗಂಗೊತ್ರಿ ಶಿಕ್ಷಣ ಟ್ರಸ್ಟ್ ಸಾಗರ.

(15) ವಿದ್ಯಾವಿಕಾಸ ಇನ್ಸ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮೈಸೂರು.

(16) ಜನತಾ ಎಜುಕೇಷನ್ ಟ್ರಸ್ಟ್, ಬೆಂಗಳೂರು.

(17) ಆದಿಚುಂಚನಗಿರಿ ಎಜುಕೇಷನ್ ಟ್ರಸ್ಟ್, ಕೋಲಾರ.

(18) ರೆಡ್ಡಿ ಜನಸಂಘ ಮಾರಸೂರು, ಆನೇಕಲ್ ತಾ.

(19) ಕರ್ನಾಟಕ ಪ್ರದೇಶ ಕುರುಬರ ಸಂಘ, ಬೆಂಗಳೂರು.

(20) ಫ್ರೀಡಂಫೈಟರ್ಸ್ ಮೆಮೋರಿಯಲ್ ಟ್ರಸ್ಟ್ ಗುಲ್ಬರ್ಗಾ.

(21) ಕರ್ನಾಟಕ ಪ್ರದೇಶ ಕುರುಬರ ಸಂಘದ ಕಾಗಿನೆಲೆ ಸಂಸ್ಥಾನ ಪೀಠ, ಹಾವೇರಿ.

ಮೇಲ್ಕಂಡ ಅರ್ಜಿಗಳು ಈಗಾಗಲೇ ಶಿಫಾರಸ್ಸು ಮಾಡಿರುವ 15 ಕಾಲೇಜುಗಳ ಅರ್ಜಿಗಳನ್ನು ಒಳಗೊಂಡಿರುವುದಿಲ್ಲ.

ಇ) ಪ್ರೋ : ಎಂ.ಐ. ಸವದತ್ತಿ ನೇತೃತ್ವದ ತಜ್ಞರ ಸಮಿತಿಯ ಶಿಫಾರಸ್ಸನ್ನು ಆಧರಿಸಿ ತಾಂತ್ರಿಕ ಶಿಕ್ಷಣ ನಿರ್ದೇಶಕರು ನೀಡಿದ ವರದಿಯನ್ನು ಪರಿಗಣಿಸಿ ನೂತನ ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆಗೆ ಅನುಮೋದನೆಗೆ ಎಐಸಿಟಿಇ ಗೆ ಶಿಫಾರಸ್ಸು ಮಾಡಲಾಗಿದೆ.

ಗುತ್ತಿಗೆ ಆಧಾರದ ಶಿಕ್ಷಕರು ಹಾಗೂ ಉಪನ್ಯಾಸಕರುಗಳ ವೇತನ ಕಡಿತ

1527 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ 1991ರಲ್ಲಿ ಖಾಯಂಗೊಂಡ ಶಿಕ್ಷಕರು ಹಾಗೂ ಉಪನ್ಯಾಸಕರುಗಳ ವಾರ್ಷಿಕ ವೇತನವನ್ನು ಕಡಿತಗೊಳಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈ ರೀತಿ ಕಡಿತಗೊಳಿಸಲು ಕಾರಣಗಳೇನು?

ಇ) ರಾಜ್ಯ ಸರ್ಕಾರ ಈ ರೀತಿ ಮಾನವೀಯ ದೃಷ್ಟಿಯಿಂದ ಇಂತ : ಅವೈಜ್ಞಾನಿಕ ಹಾಗೂ ಅನ್ಯಾಯಯುತವಾದ ಆದೇಶವನ್ನು ಹಿಂತೆಗೆದುಕೊಳ್ಳಲು ಯೋಜಿಸಿದೆಯೇ? ಹಾಗಿದ್ದಲ್ಲಿ ಯಾವಾಗ ಹಿಂತೆಗೆದುಕೊಳ್ಳಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು).

ಅ) ಸರ್ಕಾರಿ ಅಧಿಸೂಚನೆ ಸಂಖ್ಯೆ : ಡಿಪಿಎಆರ್ - 12 ಎಸ್ಆರ್ಇ-97 ದಿನಾಂಕ : 9-6-97 ರಲ್ಲಿ 1991ರಲ್ಲಿ ಖಾಯಂಗೊಂಡ ಗುತ್ತಿಗೆ ಆಧಾರದ ಶಿಕ್ಷಕರು ಹಾಗೂ ಉಪನ್ಯಾಸಕರ ಪ್ರಾರಂಭಿಕ ಮೂಲ ವೇತನವನ್ನು ಸದರಿ ನೌಕರರು ವಿಲೀನ ಹೊಂದುವ ಹುದ್ದೆಯ ಕನಿಷ್ಠ ಹಂತಕ್ಕೆ, ಅವರು ವಿಲೀನಗೊಂಡ ದಿನಾಂಕದಿಂದ ನಿಗದಿಪಡಿಸಲು ಸಂಬಂಧಪಟ್ಟ ನಿಯಮಾವಳಿಗಳಿಗೆ ತಿದ್ದುಪಡಿ ಹೊರಡಿಸಲು ಕರಡು ನಿಯಮಾವಳಿಗಳನ್ನು ಹೊರಡಿಸಲಾಗಿದೆ.

ಆ) ಗುತ್ತಿಗೆ ಆಧಾರಿತ ನೌಕರರು ಶಿಕ್ಷಣ ಇಲಾಖೆಯಲ್ಲಿಲ್ಲದೆ ಸರ್ಕಾರದ ವಿವಿಧ ಇಲಾಖೆಗಳಲ್ಲೂ ಇದ್ದು ಅವರುಗಳನ್ನು ಸೇವಾ ಸಕ್ರಮಗೊಳಿಸಲು, ಸರ್ಕಾರವು ಬೇರೆ ಬೇರೆ ಇಲಾಖೆಗಳಲ್ಲಿ ಬೇರೆ ಬೇರೆ ವಿಶೇಷ ನಿಯಮಾವಳಿಗಳನ್ನು ಹೊರಡಿಸಲಾಗಿದ್ದು, ಈ ಎಲ್ಲಾ ನಿಯಮಗಳಿಗೆ ಸಂಬಂಧಿಸಿದಂತೆ ಏಕರೂಪದ ನಿಯಮವನ್ನು ಜಾರಿಗೊಳಿಸುವ ಉದ್ದೇಶದಿಂದ ಈ ರೀತಿ ಕ್ರಮ ಜರುಗಿಸಲಾಗಿದೆ.

ಇ) ದಿನಾಂಕ : 9-6-97 ರಂದು ಹೊರಡಿಸಿರುವ ಈ ಕರಡು ವಿಶೇಷ ತಿದ್ದುಪಡಿ ನಿಯಮಾವಳಿಗಳಿಗೆ ಆಕ್ಷೇಪಣೆಗಳು ಸ್ವೀಕೃತವಾಗಿದ್ದು ಇವು ಪರಿಶೀಲನೆಯಲ್ಲಿವೆ.